ಎಂದು ಹೇಳಿದ್ದಾರೆ. ಬೋಧಕ ಮತ್ತು ಭೋಧಕೇತರ ವಿಚಾರ ಪ್ರಾರಂಭವಾಗಿ ಸುಮಾರು 8 ವರ್ಷ ಆಯಿತು.

ಅಧ್ಯಕ್ಷರು:– ತಾವು ಕೇಳಿರುವ ವಿಷಯ ಯಾವುದು ಎಂದು ನೋಡಿಕೊಳ್ಳಿ.

ಶ್ರೀ ಹೆಚ್.ಎಸ್. ಶಿವಶಂಕರ್:– ಮಾನ್ಯ ಅಧ್ಯಕ್ಷರೆ, ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಇಲ್ಲದೆ ಅಲ್ಲಿ ಕಾಲೇಜ್ ಅನ್ನು ಹೇಗೆ ನಡೆಸಬೇಕು? ವಿಶ್ವವಿದ್ಯಾನಿಲಯ ಹೇಗೆ ನಡೆಸಬೇಕು? Sanctioned posts 142 ರಲ್ಲಿ ಕೇವಲ 55 ಜನರು ಕೆಲಸ ಮಾಡುತ್ತಿದ್ದಾರೆ. 142 vacant ಇದೆ. ಗುಣಮಟ್ಟದ ಶಿಕ್ಷಣ ಸಿಗುವುದಕ್ಕೆ ಹೇಗೆ ಸಾಧ್ಯ? ಆರ್ಥಿಕ ಇಲಾಖೆಗೆ ತಾವು ಕಳುಹಿಸಿ 1 ವರ್ಷದ ಮೇಲೆ ಆಯಿತು.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ಪಡೆಯಲು ಎಲ್ಲಾ ಪ್ರಯತ್ನವನ್ನು ಮಾಡುತ್ತೇವೆ. ಈಗ ಹೇಗೆ ನಡೆಯಿತು, ಬಿಟ್ಟಿತು ಎನ್ನುವ ಪ್ರಶ್ನೆ ಅಲ್ಲ. ಇಲ್ಲಿಯವರೆಗೆ ನಡೆದು ಬಂದಿದೆ. ಇನ್ನು ಮುಂದೆ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದು ಕಾರ್ಯಕ್ರಮಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಎಸ್. ಶಿವಶಂಕರ್:– ವಿಶ್ವವಿದ್ಯಾಲಯದಲ್ಲಿ ಕೇವಲ 55 ಜನ ಇದ್ದಾರೆ. ಒಟ್ಟು 142 ಜನರ ಅವಶ್ಯಕತೆ ಇದೆ. ನೀವು ಈ ರೀತಿ ಉತ್ತರ ಕೊಟ್ಟರೆ ಕಾಲೇಜನ್ನು ಹೇಗೆ ನಡೆಸಬೇಕು? ವಿಶ್ವವಿದ್ಯಾಲಯವನ್ನು ಹೇಗೆ ನಡೆಸಬೇಕು? ಹೇಳಿ.

ಅಧ್ಯಕ್ಷರು:– ಸ್ಥಗಿತಗೊಳಿಸುವುದಕ್ಕೆ ಹೇಳಿ. ಮಾನ್ಯ ಚಲುವರಾಯ ಸ್ವಾಮಿ ಮಾತನಾಡಿ.

2. ವಿಷಯ: ಮಂಡ್ಯ ಡಿ.ಸಿ.ಸಿ. ಬ್ಯಾಂಕಿನ ತತ್ಪೂರ್ವ ಅಧ್ಯಕ್ಷರು ಕಾನೂನು ಬಾಹಿರವಾಗಿ ಆಯ್ಕೆಯಾಗಿರುವುದನ್ನು ರದ್ದುಪಡಿಸಬೇಕೆಂದು ಹಾಗೂ ಈ ಚುನಾವಣಾ ಪ್ರಕ್ರಿಯೆಗೆ ಕಾರಣರಾದ ಅಧಿಕಾರಿಗಳ

ವಿರುದ್ದ ಕ್ರಮಕೈಗೊಳ್ಳುವ ಬಗ್ಗೆ ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರ ಗಮನ ಸೆಳೆಯುವ ಬಗ್ಗೆ.

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ):– ಮಂಡ್ಯ ಡಿ.ಸಿ.ಸಿ. ಬ್ಯಾಂಕಿನ ತತ್ಪೂರ್ವ ಅಧ್ಯಕ್ಷರು ಕಾನೂನುಬಾಹಿರವಾಗಿ ಆಯ್ಕೆಯಾಗಿರುವುದನ್ನು ರದ್ದುಪಡಿಸಬೇಕೆಂದು ಹಾಗೂ ಈ ಚುನಾವಣಾ ಪ್ರಕ್ರಿಯೆಗೆ ಕಾರಣರಾದ ಅಧಿಕಾರಿಗಳ ವಿರುದ್ದ ಕ್ರಮಕೈಗೊಳ್ಳುವ ಬಗ್ಗೆ ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲಾಕೇಂದ್ರ ಸಹಕಾರ ಬ್ಯಾಂಕ್ ನಿ., ಮಂಡ್ಯ ಇದರ ಆಡಳಿತ ಮಂಡಳಿಯ ಅವಧಿಯು ದಿ: 31–03–2015 ಕ್ಕೆ ಮುಕ್ತಾಯವಾಗಿದ್ದು, ಸಹಕಾರ ಚುನಾವಣಾ ಪ್ರಾಧಿಕಾರವು ಮುಂದಿನ ಅವಧಿಗೆ ಈ ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರುಗಳ ಸ್ಥಾನಕ್ಕೆ ಚುನಾವಣೆ ನಡೆಸಲು ಜಿಲ್ಲಾ ಚುನಾವಣಾಧಿಕಾರಿಯಾಗಿ ಜಿಲ್ಲಾಧಿಕಾರಿಗಳು, ಮಂಡ್ಯ ಇವರನ್ನು ಹಾಗೂ ರಿಟರ್ನಿಂಗ್ ಆಫೀಸರ್ ಆಗಿ ಮಂಡ್ಯ ಕಂದಾಯ ಉಪವಿಭಾಗದ ಸಹಾಯಕ ಆಯುಕ್ತರನ್ನು ನೇಮಿಸಿರುತ್ತಾರೆ.

ಮಂಡ್ಯ ಜಿಲ್ಲಾಕೇಂದ್ರ ಸಹಕಾರ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಒಟ್ಟು 15 ಜನ ನಿರ್ದೇಶಕರ ಸ್ಥಾನಗಳಿದ್ದು, ಈ ಪೈಕಿ 12 ಸ್ಥಾನಗಳಿಗೆ ಸಂಬಂಧಿಸಿದ ಕ್ಷೇತ್ರಗಳಿಂದ ಚುನಾವಣೆ ಮೂಲಕ ನಿರ್ದೇಶಕರುಗಳು ಆಯ್ಕೆಯಾಗಬೇಕಾಗಿರುತ್ತದೆ. ಉಳಿದ ಮೂರು ಸ್ಥಾನಗಳ ಪೈಕಿ

1. ಹಣಕಾಸು ಸಂಸ್ಥೆಯಾದ ಅಪೆಕ್ಸ್ ಬ್ಯಾಂಕಿನಿಂದ ನಾಮನಿರ್ದೇಶನ.
2. ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರು (ಪದನಿಮಿತ್ತ ನಿರ್ದೇಶಕರು).

3. ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 28–A(4B)(1) ರನ್ವಯ ಸರ್ಕಾರದಿಂದ ನಾಮನಿರ್ದೇಶಿತ, ನಿರ್ದೇಶಕರು ಇರುತ್ತಾರೆ.

ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ಚುನಾವಣೆ ಮೂಲಕ ಆಯ್ಕೆಯಾದ ಒಟ್ಟು 12 ನಿರ್ದೇಶಕ ಸ್ಥಾನಗಳಿಗೆ ದಿನಾಂಕ: 14–06–2015 ರಂದು ಚುನಾವಣೆ ನಡೆದಿದ್ದು, ಅವರ ವಿವರ ಈ ಕೆಳಕಂಡಂತಿರುತ್ತದೆ.

ಕ್ರ.ಸಂ.	ಕ್ಷೇತ್ರಗಳ ಹೆಸರು	ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿರುವವರ ಹೆಸರು
1	ಮಂಡ್ಯ ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದ ಪ್ರತಿನಿಧಿ	ಸಿ. ಅಶ್ವಥ್
2	ಮದ್ದೂರು ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದ ಪ್ರತಿನಿಧಿ	ಎಂ. ಹೊನ್ನೇಗೌಡ
3	ಮಳವಳ್ಳಿ ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದ ಪ್ರತಿನಿಧಿ	ಪುಟ್ಟರಾಮು
4	ಪಾಂಡವಪುರ ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದ ಪ್ರತಿನಿಧಿ	ಎಸ್. ನಾಗರಾಜು
5	ಶ್ರೀರಂಗಪಟ್ಟಣ ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದ ಪ್ರತಿನಿಧಿ	ಎನ್.ವಿ. ಚೆಲುವರಾಜು
6	ಕೆ.ಆರ್ ಪೇಟೆ ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದ ಪ್ರತಿನಿಧಿ	ವಿ.ಡಿ. ಹರೀಶ್
7	ನಾಗಮಂಗಲ ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದ ಪ್ರತಿನಿಧಿ	ಹೆಚ್.ಎಸ್. ನರಸಿಂಹಯ್ಯ
8	ಜಿಲ್ಲಾದ್ಯಂತ ಬ್ಯಾಂಕಿನ ಸದಸ್ಯತ್ವ ಹೊಂದಿರುವ ತಾಲ್ಲೋಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳ ಕ್ಷೇತ್ರದ ಪ್ರತಿನಿಧಿ.	ಸತೀಶ
9	ಜಿಲ್ಲಾದ್ಯಂತ ಬ್ಯಾಂಕಿನ ಸದಸ್ಯತ್ವ ಹೊಂದಿರುವ ಬಳಕೆದಾರರ ಮತ್ತು ಸಂಸ್ಕರಣ ಸಹಕಾರ ಸಂಘಗಳು ಮತ್ತು ನಗರ ಸಹಕಾರಿ ಬ್ಯಾಂಕ್ ಹಾಗೂ ವ್ಯವಸಾಯೇತರ ಸಹಕಾರ ಸಂಘಗಳ ಕ್ಷೇತ್ರದ ಪ್ರತಿನಿಧಿ	ಕೆ.ಸಿ. ಜೋಗೀಗೌಡ

10	ಮಂಡ್ಯ ವಿಭಾಗದ ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇತ್ರದ ಪ್ರತಿನಿಧಿ	ಎಂ.ಬಿ. ಮಲ್ಲಯ್ಯ
11	ಪಾಂಡವಪುರ ವಿಭಾಗದ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕ್ಷೇತ್ರದ ಪ್ರತಿನಿಧಿ	ವಿ. ವಿಜೇಂದ್ರ ಮೂರ್ತಿ
12	ಜಿಲ್ಲಾದ್ಯಂತ ಬ್ಯಾಂಕಿನ ಸದಸ್ಯತ್ವ ಹೊಂದಿರುವ ಕೈಗಾರಿಕಾ ಸಹಕಾರ ಸಂಘಗಳು (ನೇಕಾರರ ಸಹಕಾರ ಸಂಘಗಳು ಸೇರಿದಂತೆ) ಕಾರ್ಮಿಕ ಸಹಕಾರ ಸಂಘಗಳು ಹಾಗೂ ಇನ್ನಿತರೆ ಸಹಕಾರ ಸಂಘಗಳು (ಫಾರ್ಮಿಂಗ್ ಸಹಕಾರ ಸಂಘಗಳು ಸೇರಿದಂತೆ) ಕ್ಷೇತ್ರದ ಪ್ರತಿನಿಧಿ	ಕೆ.ಎಲ್. ದೊಡ್ಡಲಿಂಗೇಗೌಡ

ದಿನಾಂಕ: 27–06–2015 ರಂದು ಬ್ಯಾಂಕಿನ ಪದಾಧಿಕಾರಿಗಳ ಚುನಾವಣೆ ನಡೆದು, ಶ್ರೀ ವಿ.ಡಿ. ಹರೀಶ್ ಇವರು ಅಧ್ಯಕ್ಷರಾಗಿ, ಶ್ರೀ ಪುಟ್ಟರಾಮು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

ಬ್ಯಾಂಕಿನ ತತ್ಪೂರ್ವ ಅಧ್ಯಕ್ಷರಾದ ಶ್ರೀ ಸತೀಶ್ ಇವರು ಜಿಲ್ಲೆಯ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳ ಕ್ಷೇತ್ರದಿಂದ ಪ್ರತಿನಿಧಿಯಾಗಿ ಚುನಾವಣೆಗೆ ಸ್ಪರ್ಧಿಸಿದ್ದು, ಇದನ್ನು ಪ್ರಶ್ನಿಸಿ. ಶ್ರೀ ಕೆ.ಪಿ. ಶಿವನಂಜೇಗೌಡ ಇವರು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್‌ಅರ್ಜಿ ಸಂಖ್ಯೆ: 24077/2015 ರಲ್ಲಿ ಪ್ರಶ್ನಿಸಿದ್ದು, ಈ ರಿಟ್‌ಅರ್ಜಿಯು ದಿನಾಂಕ: 11–06–2015 ರಂದು ವಜಾಗೊಂಡಿರುತ್ತದೆ.

ಶ್ರೀ ಸತೀಶ್ ಇವರು ಡಿಸಿಸಿ ಬ್ಯಾಂಕ್ ನಿ., ಮಂಡ್ಯ ಇದರ ಆಡಳಿತ ಮಂಡಳಿ ಸದಸ್ಯರಾಗಿ ಚುನಾಯಿತರಾಗಿರುವ ಬಗ್ಗೆ ಬಾಧಿತ ವ್ಯಕ್ತಿಗಳು ಪ್ರಶ್ನಿಸುವುದಿದ್ದಲ್ಲಿ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 70 ರನ್ವಯ ಚುನಾವಣಾ ದಾವಾ ಅರ್ಜಿ ದಾಖಲಿಸಿ. ಪರಿಹಾರ ಕಂಡುಕೊಳ್ಳಬೇಕಾಗುತ್ತದೆ.

ಮೇಲೆ ವಿವರಿಸಿರುವಂತೆ ಇದು ಚುನಾವಣಾ ತಕರಾರು ಇರುವುದರಿಂದ ನ್ಯಾಯಾಲಯದಲ್ಲೇ ಪ್ರಕರಣ ಇತ್ಯರ್ಥವಾಗಬೇಕಾಗಿದ್ದು ಆಡಾಳಿತಾತ್ಮಕವಾಗಿ ಈ ಬಗ್ಗೆ ಕ್ರಮವಿಡಲು ಅವಕಾಶ ಇರುವುದಿಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯ ಡಿ.ಸಿ.ಸಿ ಬ್ಯಾಂಕಿನ ಚುನಾವಣೆಯಲ್ಲಿ ನಡೆದಿರತಕ್ಕಂತಹ ಅವ್ಯವಹಾರದ ಬಗ್ಗೆ ಮಂತ್ರಿಗಳನ್ನು ಗಮನಸೆಳೆಯುತ್ತಿದ್ದೇನೆ. ಬಹುಶಃ ಉತ್ತರ ಕೊಟ್ಟಿದ್ದಾರೆ. ಅದನ್ನು ಓದುವ ಅವಶ್ಯಕತೆಯಿಲ್ಲ. ಎರಡೂ–ಮೂರು ಪ್ರಶ್ನೆಗಳನ್ನು ನೇರವಾಗಿ ಕೇಳಿಬಿಡುತ್ತೇನೆ, ನೀವು ಕೊಟ್ಟಿರುವ ಟೈಮ್ ಪ್ರಕಾರ ಎನ್ನುವುದು ನನ್ನ request. ಪೂರ್ತಿ ಓದುವ ಅವಶ್ಯಕತೆಯಿಲ್ಲ. ಕೇಳಿ ಎಂದರೆ ಕೇಳಿಬಿಡುತ್ತೇನೆ. ಒಂದು section 28-A(4B)(1) ರಲ್ಲಿ ಡಿ.ಸಿ.ಸಿ ಬ್ಯಾಂಕಿನಿಂದ nomination ಹೋಗಿ RAPCMS ನಿಂದ ಮತ್ತೆ ಡಿ.ಸಿ.ಸಿ ಬ್ಯಾಂಕ್‌ಗೆ ಚುನಾವಣೆಗೆ ನಿಂತುಕೊಳ್ಳುವುದಕ್ಕೆ ಅವರಿಗೆ ನಿಮ್ಮ section ಪ್ರಕಾರ ಅವಕಾಶವಿಲ್ಲ. ಆದರೂ ಅಲ್ಲಿ ಡಿ.ಸಿ.ಸಿ ಬ್ಯಾಂಕ್‌ನಿಂದ ಹೋದಂತಹ nomination ಅನ್ನು RAPCMS ನಲ್ಲಿ resolution ಕೂಡ ಆಗಿಲ್ಲ. Accept ಕೂಡ ಮಾಡಿಲ್ಲ. ಆದರೂ ಸಹ ಆ ಒಂದು ವ್ಯವಸ್ಥಾಪಕ ನಿರ್ದೇಶಕರು ಆ ಬೋರ್ಡ್ ಅವರನ್ನು ಚುನಾವಣೆಗೆ ನಿಂತುಕೊಳ್ಳುವುದಕ್ಕೆ ಒಂದು voting power ಕೊಡುತ್ತಾರೆ. ಇದು ಕಾನೂನು ಬಾಹಿರ. ನಾನು ಚುನಾವಣೆಯನ್ನು question ಮಾಡಿಲ್ಲ. ಚುನಾವಣೆಯನ್ನು ನ್ಯಾಯಾಂಗದಲ್ಲಿ ಕೇಳಿಕೊಳ್ಳುತ್ತೇವೆ. ಆದರೆ, ಕಾನೂನುಬಾಹಿರವಾದಂತಹ ಚಟುವಟಿಕೆಗಳನ್ನು ಚುನಾವಣೆಗಿಂತ ಪೂರ್ವವಾಗಿ ಮಾಡಿದ್ದಾರಲ್ಲಾ, ಅದಕ್ಕೆ ಅಧಿಕಾರಗಳ ಮೇಲೆ ಆ ಬೋರ್ಡ್ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಆಮೇಲೆ ಸತೀಶ್ ಎಂದು ಯಾರು ಡಿ.ಸಿ.ಸಿ ಬ್ಯಾಂಕ್‌ಗೆ ಬಂದಿದ್ದಾರೆ, ಒಂದು ಏನೆಂದರೆ, ರೂ. 2 ಕೋಟಿಗಳಿಗೆ ಸಂಬಂಧಿಸಿದ ಹಿಂದಿನ ಹಗರಣದಲ್ಲಿ CBI ಗೆ ಹೋಗಿದೆ. ಅದರಲ್ಲಿ FIR ಆಗಿದೆ, ಅವರು ಒಬ್ಬರು ಅದರಲ್ಲಿ ಅಪರಾಧಿಯಾಗಿದ್ದಾರೆ. ಎರಡನೆಯದು, ಬ್ಯಾಂಕಿನ ಅವ್ಯವಹಾರದ ಬಗ್ಗೆ 64 enquiry J.R.court ನಲ್ಲಿ judgment pending ಇದೆ. ಇಷ್ಟು ಇದ್ದಾಗ ಮತ್ತು

ಅವರಿಗೆ ಚುನಾವಣೆಗೆ ನಿಂತುಕೊಳ್ಳುವುದಕ್ಕೆ ಚುನಾವಣೆಯಲ್ಲಿ ಆಯ್ಕೆ ಆಗಲಿಕ್ಕೆ ಅರ್ಹತೆಯಿದೆಯೇ? ದಯಮಾಡಿ ಕೋರ್ಟ್‌ದು ಒಂದು ಕಡೆಯಾಗುತ್ತದೆ. ಸರ್ಕಾರ ಇಂತಹದ್ದಕ್ಕೆ cooperative ನಲ್ಲಿ ಅವಕಾಶ ಕೊಡುವುದಾದರೆ ಪೂರ್ಣ ಪ್ರಮಾಣದಲ್ಲಿ ನೀವು nomination ಅನ್ನು ಬೇರೆ ಬೋರ್ಡ್ ಮಾಡಿದ ಹಾಗೆ ತೆಗೆದುಕೊಳ್ಳುವುದು ಒಳ್ಳೆಯದು. ದಯಮಾಡಿ "ಬೇಲಿಯೇ ಎದ್ದು ಹೊಲ ಮೇಯುವ ರೀತಿ"ಯಲ್ಲಿ ನೂರಕ್ಕೆ ನೂರು ಎದ್ದು ಕಾಣುವ ರೀತಿಯಲ್ಲಿ ಅವ್ಯವಹಾರದ ಬಗ್ಗೆ ಯಾವ ಅಧಿಕಾರಿಗಳು ಈ ವಿಷಯದಲ್ಲಿ ಶಾಮೀಲಾದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಸತೀಶ್ ಆಯ್ಕೆಯನ್ನು ನಾವು question ಮಾಡುತ್ತೇವೆ. ಅರ್ಹತೆಯಿದ್ದರೆ ನಿಮಗೆ ಅವಕಾಶವಿದ್ದರೆ ಕಾನೂನುಬದ್ಧವಾಗಿ delete ಮಾಡಿ, ಅವನನ್ನು disqualify ಮಾಡಿ. ಅವಕಾಶವಿಲ್ಲದಿದ್ದರೆ ಕೋರ್ಟ್‌ನಲ್ಲಿ ಕೇಳಿಕೊಳ್ಳುತ್ತೇವೆ. ಆದರೆ, ಆ process ಇದೆಯಲ್ಲಾ, before ಚುನಾವಣೆ, ದಯಮಾಡಿ ಇಂತಹದ್ದಕ್ಕೆ ಅವಕಾಶ ಕೊಟ್ಟರೆ ನೀವು ಇವತ್ತು ಮಂತ್ರಿಯಾಗಿರುತ್ತೀರಿ, ನಾಳೆ ಇನ್ನೊಬ್ಬರು ಇರುತ್ತಾರೆ. ಮತ್ತೆ ಮತ್ತೊಬ್ಬರು ಇರುತ್ತಾರೆ. cooperative ನಲ್ಲಿ ನಾವು ಇಂತಹದ್ದಕ್ಕೆ ಅವಕಾಶ ಕೊಡುವುದು ಬೇಡ.

(ಗೊಂದಲ)

ಅಧ್ಯಕ್ಷರು:– ಚಲುವರಾಯಸ್ವಾಮಿಯವರೆ, ಇದೆಲ್ಲಾ ಇದ್ದರೇನೇ ಡಿ.ಸಿ.ಸಿ ಬ್ಯಾಂಕ್. ಅವರೇ ಅಪೆಕ್ಸ್ ಬ್ಯಾಂಕ್. ಅವರೇ ಸರ್ಕಾರ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಸಹಕಾರ ಮತ್ತು ಸಕ್ಕರೆ ಸಚಿವರು):– ಮಾನ್ಯ ಅಧ್ಯಕ್ಷರೆ, . . .

(ಗೊಂದಲ)

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ:– ಮಾನ್ಯ ಅಧ್ಯಕ್ಷರೆ, ಇದು ಮಂಡ್ಯ ಜಿಲ್ಲೆಯ ವಿಚಾರವಾಗಿದ್ದರಿಂದ ಇದು ಈಗಾಗಲೇ ಹೈಕೋರ್ಟ್‌ನಲ್ಲಿ ತೀರ್ಮಾನವಾಗಿರತಕ್ಕಂತಹ ವಿಚಾರವಾಗಿದೆ. ಹೈಕೋರ್ಟ್‌ನಲ್ಲಿ ಚುನಾವಣೆಗೂ ಮೊದಲೇ ಇದೇ ವಿಚಾರವಾಗಿ ಒಂದು ಚುನಾವಣಾ ಅರ್ಜಿ ಹಾಕಿದ್ದು, ಅದಕ್ಕೆ ಉತ್ತರ ಬಂದಿದೆ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ:– ದಯಮಾಡಿ ಕೋರ್ಟ್‌ನಲ್ಲಿ ತೀರ್ಮಾನವಾಗಿರುವುದರಿಂದ ಅದನ್ನು ಕೋರ್ಟ್‌ನಲ್ಲಿ ಪ್ರಶ್ನೆ ಮಾಡ್ರಿ.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ:– ನರೇಂದ್ರ ಸ್ವಾಮಿಯವರೆ, ಇದಕ್ಕೆ ಸಂಬಂಧವಿಲ್ಲ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ:– ಇದು ವೈಯುಕ್ತಿಕವಾದ ವಿಚಾರ. ಅವರ ಮೇಲೆ ವೈಯುಕ್ತಿಕವಾದಂತಹ ಆಪಾದನೆ ಮಾಡಬಾರದು.

(ಗೊಂದಲ)

ಅಧ್ಯಕ್ಷರು:– ಈಗ ಮಂತ್ರಿಗಳಿದ್ದಾರೆ. ಹೇಳುತ್ತಾರೆ ಬಿಡ್ರಿ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ:– ಮಾನ್ಯ ಅಧ್ಯಕ್ಷರೆ, ಕೋರ್ಟ್‌ನಲ್ಲಿ ತೀರ್ಮಾನವಾಗಿದೆ. ಕೋರ್ಟ್‌ನಲ್ಲಿ ತೀರ್ಮಾನವಾಗಿರುವಂತಹ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ:– ಕೋರ್ಟ್‌ನಲ್ಲಿ reject ಆಗಿದೆ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ:– ಕೋರ್ಟ್‌ನಲ್ಲಿ reject ಆಗಿಲ್ಲ. ಕೋರ್ಟ್‌ನಲ್ಲಿ ತೀರ್ಮಾನವಾಗಿದೆ.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ನಾನು ಹೇಳುವವರೆಗೆ ಕೇಳ್ರಿ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ:– ಮಂತ್ರಿಗಳು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲಾ ಕೇಂದ್ರ ಬ್ಯಾಂಕ್‌ನ ಚುನಾವಣೆಯ ಸಂದರ್ಭದಲ್ಲಿ ಡಿ.ಸಿ.ಸಿ ಬ್ಯಾಂಕ್ ಪ್ರತಿನಿಧಿಯಾಗಿ RAPCMS ಕಡೆಯಿಂದ ಬಂದು ಆ ನಿರ್ದೇಶಕ ಸ್ಥಾನಕ್ಕೆ ಆಯ್ಕೆಯಾಗಿರುವುದರ ಬಗ್ಗೆ ಅವರು ತಕರಾರನ್ನು ಮತ್ತೆ ಅವರ nomination ಕ್ರಮಬದ್ಧತೆಯ ಬಗ್ಗೆ ಅವರು ಪ್ರಶ್ನೆ ಮಾಡಿ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ಚುನಾವಣೆ ಪ್ರಕ್ರಿಯೆಯಾಗಿರುವುದರಿಂದ ಇದನ್ನು ಚುನಾವಣಾ ತಕರಾರು ಅರ್ಜಿಯಲ್ಲಿಯೇ ಬಗೆಹರಿಸಿಕೊಳ್ಳಬೇಕು.

ಶ್ರೀ ಎನ್. ಚಲುವರಾಯಸ್ವಾಮಿ:– ಸರಿ. ಆದರೆ, ಇದು ಬೋರ್ಡ್‌ನಲ್ಲಿ resolution ಆಗಿಯೇ ಇಲ್ಲ. ಇವರ nomination RAPCMS ನಲ್ಲಿ resolution ಆಗಿಲ್ಲ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಅದನ್ನು scrutiny time ನಲ್ಲಿ..

(ಗೊಂದಲ)

ಅಧ್ಯಕ್ಷರು:– ಆಗುತ್ತದೋ ಅಥವಾ ಇಲ್ಲವೋ ಅಷ್ಟು ಹೇಳ್ರಿ ಮಾರಾಯ್ರೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಚುನಾವಣೆ ಪ್ರಕ್ರಿಯೆಯಲ್ಲಿ ನಡೆದಿರುವಂತಹ ವಿಚಾರವನ್ನು ಇವರು ಪ್ರಸ್ತಾಪ ಮಾಡುತ್ತಿರುವುದರಿಂದ ಈಗಾಗಲೇ ಚುನಾವಣೆ ನಡೆದು ಹೋಗಿದೆ. ಅದನ್ನು ಪರಿಶೀಲನೆ ಮಾಡುವಂತಹ ಸಂದರ್ಭದಲ್ಲಿ ತಕರಾರುಗಳನ್ನು ಹಾಕಿ ಅದಕ್ಕೆ ತಡೆ ಒಡ್ಡಬೇಕಾಯಿತು. ಆ ಸಂದರ್ಭದಲ್ಲಿ ಅದನ್ನು ಅವರು ಮಾಡಿಲ್ಲ. ಆ ಒಂದು ಕಾರಣದಿಂದ ಈಗ ಏನು ಇದ್ದರೂ ಮತ್ತೆ ಅವರು section 70 ರ ಪ್ರಕಾರ ಚುನಾವಣೆ ದಾವೆ ಅರ್ಜಿ ದಾಖಲಿಸಿ ಅದರಲ್ಲಿಯೇ ಅವರು ಪರಿಹಾರ ಕಂಡುಕೊಳ್ಳಬೇಕು. ಅದು ಒಂದೇ ಅವರ ಮಾರ್ಗ ಇರುವುದರಿಂದ ಅದನ್ನು . . . .

ಶ್ರೀ ಎನ್. ಚಲುವರಾಯಸ್ವಾಮಿ:– ಅದನ್ನು ಕಂಡುಕೊಳ್ಳುತ್ತೇವೆ. ನಿಮ್ಮ ಅಧಿಕಾರಿ ಕಣ್ಣುಮುಚ್ಚಿಕೊಂಡು resolution ಮಾಡುವಂತಹದ್ದರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಅದರ ಬಗ್ಗೆ ಅವರು ದೂರು ಕೊಟ್ಟರೆ ಪರಿಶೀಲನೆ ಮಾಡುತ್ತೇವೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಅಷ್ಟು ಮಾಡಿ ಅಷ್ಟೆ.

3. **ವಿಷಯ: ಕೊಡಗು ಜಿಲ್ಲೆಯ ವಿರಾಜಪೇಟೆ ಹಾಗೂ ಮಡಿಕೇರಿ ತಾಲ್ಲೂಕಿನ ಮಡಿಕೇರಿ–ಮೈಸೂರು, ಬೆಂಗಳೂರು–ಗೋಣಿಕೊಪ್ಪ–ಮೈಸೂರು ಹಾಗೂ ಬೆಂಗಳೂರು–ಕುಶಾಲನಗರ–ಚಿತ್ರದುರ್ಗ ಮಾರ್ಗಗಳಲ್ಲಿ ಪುನಃ ಸಾರಿಗೆ ಸೇವೆಯನ್ನು ಪ್ರಾರಂಭಿಸುವ ಬಗ್ಗೆ.**